ಚಿತ್ರಮಂದಿರದ ಕತ್ತಲಿಗಿರುವ ಈ ಶಕ್ತಿಯೇ ಜನರನ್ನು ಮತ್ತೆ ಚಿತ್ರಮಂದಿರಗಳಿಗೆ ಕರೆತರುತ್ತದೆ ಎಂಬುದು ಚಿತ್ರರಂಗದ ಬಹುತೇಕರ ನಂಬಿಕೆ.

‘ಜನ ಮತ್ತೆ ಚಿತ್ರಮಂದಿರಗಳಿಗೆ ಬಂದೇ ಬರುತ್ತಾರೆ’ ಎಂಬುದನ್ನು ನಿರ್ದೇಶಕ ಸತ್ಯಪ್ರಕಾಶ ಅವರೂ ಒಪ್ಪುತ್ತಾರೆ. ಆದರೆ ಅದಕ್ಕೆ ಎಷ್ಟು ಸಮಯ ತಗುಲಬಹುದು ಎಂಬ ಬಗ್ಗೆ ಅವರಿಗೆ ಅನುಮಾನಗಳಿವೆ.

‘ನಾವು ಸಿನಿಮಾದವರಾಗಿ ಸಿನಿಮಾ ಕ್ರೇಜ್, ಪ್ಯಾಷನ್ ಅಂತೆಲ್ಲ ಯೋಚಿಸ್ತೀವಿ. ಆದರೆ ಜನರಿಗೆ ಇನ್ನೂ ಭಯ ಹೋಗಿಲ್ಲ. ಅಲ್ಲದೆ ಕನ್ನಡದಲ್ಲಿ ಸಿನಿಮಾ ಬಗ್ಗೆ ಜನರಿಗೆ ಅಂಥ ಕ್ರೇಜ್ ಕೂಡ ಇಲ್ಲ. ದೇವಸ್ಥಾನ, ಹೋಟೆಲ್, ನಂತರ ಮನೆ ಎಲ್ಲ ಮುಗಿದ ಮೇಲೆ ಮನರಂಜನೆಯ ಕೊನೆ ಆಯ್ಕೆಯಾಗಿ ಸಿನಿಮಾಗೆ ಬರುತ್ತಾರೆ. ಹೀಗಿರುವಾಗ ಪರಿಸ್ಥಿತಿ ಮೊದಲಿನಂತಾಗಲು ಬಹುಶಃ ಲಸಿಕೆಯೇ ಬರಬೇಕಾಗಬಹುದೇನೋ’ ಎನ್ನುವುದು ಅವರ ಮಾತು.

‘ಆದರೆ ಚಿತ್ರಮಂದಿರಕ್ಕೆ ಜನರು ಬರಲು ಶುರುಮಾಡಿದ ಸಮಯದಲ್ಲಿ ಬಿಡುಗಡೆಯಾಗುವ ಸಿನಿಮಾಗಳು ಮಾಮೂಲಿಗಿಂತ ದುಪ್ಪಟ್ಟು ಗಳಿಕೆ ಮಾಡುವ ಎಲ್ಲ ಸಾಧ್ಯತೆಗಳೂ ಇವೆ’ ಎನ್ನುವುದು ಅವರ ಊಹೆ. ಅದಕ್ಕೆ ಅವರು ಕಾರಣಗಳನ್ನೂ ನೀಡುತ್ತಾರೆ.

‘ಯಾರೂ ಸುಮ್ಮನೆ ಮನೆಯಲ್ಲಿ ಕೂತಿರಲು ಬಯಸುವುದಿಲ್ಲ. ಈ ವರ್ಷವಿಡೀ ಜನರು ಮನೆಯಲ್ಲಿಯೇ ಕೂತಿದ್ದಾರೆ. ಒಟಿಟಿಗಳಲ್ಲಿ ಸಿನಿಮಾಗಳನ್ನು ನೋಡಿ ನೋಡಿ ಅವರಿಗೂ ಸಾಕಾಗಿದೆ. ಮನೆಯಲ್ಲಿಯೇ ಕೂತು ತಲೆಚಿಟ್ಟು ಹಿಡಿದು ಹೊರಬಂದು ಚಿತ್ರಮಂದಿರಕ್ಕೆ ಬರಲು ಅವರೂ ಕಾಯುತ್ತಿದ್ದಾರೆ. ಊರ ಕಡೆಗಳಿಗೆ ಹೋಗುವ ಬಸ್ ಎಷ್ಟು ರಶ್ ಆಗುತ್ತಿದೆ ನೋಡಿ. ಹೋಟೆಲ್‌ಗಳು ಕಿಕ್ಕಿರಿದಿರುತ್ತವೆ. ಮಾಮೂಲಿಗಿಂತ ಜಾಸ್ತಿ ಜನರು ಪ್ರವಾಸಗಳಿಗೆ ಹೋಗುತ್ತಿದ್ದಾರೆ. ಹಾಗೆಯೇ ಚಿತ್ರಮಂದಿರಗಳಿಗೂ ಜನರು ಬರುತ್ತಾರೆ. ಸಾಮಾನ್ಯ ಪ್ರೇಕ್ಷಕರಷ್ಟೇ ಅಲ್ಲ, ಇದುವರೆಗೆ ಚಿತ್ರಮಂದಿರಗಳಿಗೆ ಬರದೇ ಇರುವ ಹೊಸ ಪ್ರೇಕ್ಷಕವರ್ಗವೂ ಚಿತ್ರಮಂದಿರಕ್ಕೆ ಲಗ್ಗೆ ಇಡಬಹುದು’ ಎಂಬ ಆಶಾವಾದದ ಮಾತುಗಳನ್ನು ಅವರು ಆಡುತ್ತಾರೆ.

ಆದರೆ ಮಂಸೋರೆ ಅವರಿಗೆ ಇರುವ ಆತಂಕವೇ ಸತ್ಯಪ್ರಕಾಶ್ ಅವರಿಗೂ ಇದೆ. ಜನರು ಚಿತ್ರಮಂದಿರಕ್ಕೆ ಬರಲು ಶುರುಮಾಡಿದ ಮೇಲೆ ಚಿತ್ರಮಂದಿರಗಳೇನೋ ಭರ್ತಿಯಾಗಬಹುದು. ಆದರೆ ಬಿಡುಗಡೆಯಾಗಲು ಕಾದಿರುವ ಸಿನಿಮಾಗಳ ಸರತಿ ಸಾಲನ್ನು ನೋಡಿದರೆ ಇನ್ನೊಂದು ಗಂಭೀರ ಸಮಸ್ಯೆ ಮುಖಕ್ಕೆ ರಾಚುತ್ತದೆ. ಹೇಳಿ ಕೇಳಿ ಕರ್ನಾಟಕ ಕನ್ನಡವಷ್ಟೇ ಅಲ್ಲ, ಹಲವು ಭಾಷೆಗಳ ಸಿನಿಮಾಗಳಿಗೆ ಒಳ್ಳೆಯ ಮಾರುಕಟ್ಟೆ. ಈಗ ಕನ್ನಡದ್ದೇ ಕನಿಷ್ಠ ಎರಡು ನೂರು ಸಿನಿಮಾಗಳು ಬಿಡುಗಡೆಗೆ ಸಜ್ಜಾಗಿವೆ. ಬೇರೆ ಭಾಷೆಯ ಕನಿಷ್ಠ ಐದಾರು ನೂರು ಸಿನಿಮಾಗಳು ಕರ್ನಾಟಕದ ಚಿತ್ರಮಂದಿರಗಳ ಮೇಲೂ ಕಣ್ಣು ನೆಟ್ಟುಕೂತಿವೆ.




‘ಕೆ.ಜಿ.ಎಫ್. 2’ ಸಿನಿಮಾದಲ್ಲಿ ಅಧೀರನಾಗಿ ಸಂಜಯ್ ದತ್ ಅಭಿನಯಿಸಿರುವುದು ಆ ಸಿನಿಮಾದ ಕ್ರೇಜ್ ಅನ್ನು ಇನ್ನಷ್ಟು ಹೆಚ್ಚಿಸಿದೆ

ಈ ಎಲ್ಲ ಸಿನಿಮಾಗಳು ತೆರೆಕಾಣುವುದು ಯಾವಾಗ? ಪರಭಾಷೆಯ ಸಿನಿಮಾ ಮಧ್ಯೆ ಕನ್ನಡ ಸಿನಿಮಾಗಳ ಗತಿ ಏನು? ಒಂದು ಸಿನಿಮಾ ಎಷ್ಟು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಬಹುದು? ಎಷ್ಟು ದಿನ ಚಿತ್ರಮಂದಿರಗಳಲ್ಲಿ ಉಳಿದುಕೊಳ್ಳಬಹುದು? ಈ ಪ್ರಶ್ನೆಗಳನ್ನು ಕೇಳಿಕೊಂಡರೆ 2021ರಲ್ಲಿ ಕನ್ನಡ ಚಿತ್ರರಂಗ ಮುಖಾಮುಖಿಯಾಗಲಿರುವ ಇನ್ನೊಂದು ಬೃಹತ್ ಸಮಸ್ಯೆಯ ದರ್ಶನವಾಗುತ್ತದೆ.

### ಹೆಸರಿಗಷ್ಟೇ ಇಂಡಸ್ಟ್ರಿ

‘ನಮ್ಮಲ್ಲಿ ಚಿತ್ರರಂಗ ಯಾವುದಕ್ಕೂ ಇನ್ನೂ ಸಿದ್ಧವಾಗಿಲ್ಲ. ಒಂದು ಇಂಡಸ್ಟ್ರಿ ಎಂದ ಮೇಲೆ ಕೆಲವು ನೀತಿ ನಿಯಮಗಳು, ನಿಯಂತ್ರಣಗಳು ಇರಲೇಬೇಕಾಗುತ್ತವೆ. ನಮ್ಮಲ್ಲಿ ಅಂಥ ಯಾವ ನಿಯಮಗಳೂ ಇಲ್ಲ. ಕನ್ನಡದ ಸಿನಿಮಾಗಳಿಗೆ ಇಷ್ಟು ಚಿತ್ರಮಂದಿರ ಮೀಸಲಿಡಬೇಕು ಎಂಬ ನಿಯಮ ತರಲು ನಮಗೆ ಇನ್ನೂ ಸಾಧ್ಯವಾಗಿಲ್ಲ. ಸಮಸ್ಯೆ ಕುತ್ತಿಗೆವರೆಗೆ ಬಂದಾಗ ಮಾತ್ರ ಅದರ ಬಗ್ಗೆ ಯೋಚಿಸುತ್ತೇವೆ ನಾವು. ಇಂಡಸ್ಟ್ರಿ ಎಂದು ಬಾಯಿ ಮಾತಿನಲ್ಲಿ ಹೇಳುತ್ತೇವೆಯೇ ವಿನಾ, ನಮ್ಮದು ಇನ್ನೂ ಒಂದು ವ್ಯವಸ್ಥಿತ ಇಂಡಸ್ಟ್ರಿಯಾಗಿ ಬೆಳೆದೇ ಇಲ್ಲ. ಇಲ್ಲಿ ಸಿನಿಮಾ ಬಗ್ಗೆ ವಿಪರೀತ ಪ್ಯಾಷನ್ ಇರುವವರು, ದುಡ್ಡು ಕಳೆದುಕೊಳ್ಳಲಿಕ್ಕೆ ಸಿದ್ಧ ಇರುವವರು ಸಿನಿಮಾ ಮಾಡ್ತಿದ್ದಾರಷ್ಟೆ’ ಎಂದು ತುಸು ವಿಷಾದದಿಂದಲೇ ಹೇಳುತ್ತಾರೆ ಸತ್ಯ. ಕನ್ನಡ ಚಿತ್ರರಂಗದ ಅವ್ಯವಸ್ಥೆ, ವಾಣಿಜ್ಯಮಂಡಳಿ, ವಿವಿಧ ಸಂಘಗಳ ನಾಮಕಾವಸ್ಥೆ ಕೆಲಸಗಳನ್ನು ಗಮನಿಸಿದರೆ ಅವರ ಮಾತಿನ ವಾಸ್ತವ ಕಣ್ಣಿಗೆ ರಾಚುತ್ತದೆ.

ಒಟ್ಟಿನಲ್ಲಿ ಕನ್ನಡ ಚಿತ್ರರಂಗದ ಪಾಲಿಗೆ 2020 ಎಂಬುದು ಬರೀ ಸಂಕಟವಷ್ಟೇ ಅಲ್ಲ, ಸಂಕ್ರಮಣ ಕಾಲವೂ ಹೌದು. ಕಡಿದಾದ ದಾರಿಯ ತಿರುವಿನಲ್ಲಿ ಚಂದನವನದ ತೇರು ನಿಂತಿದೆ. ತಿರುವಿನಾಚೆ ಏನು ಕಾದಿದೆ ಎಂಬುದು ಯಾರಿಗೂ ಸ್ಪಷ್ಟವಾಗಿ ಕಾಣುತ್ತಿಲ್ಲ. ಸಿನಿಮಾ ಪರಿಭಾಷೆಯಲ್ಲಿಯೇ ಹೇಳುವುದಾದರೆ ಇದು ನಿಜಕ್ಕೂ ಅನಿರೀಕ್ಷಿತ ಟ್ವಿಸ್ಟ್. ಇದರ ಪರಿಣಾಮಗಳು ಸದ್ಯಕ್ಕಂತೂ ಪೂರ್ತಿಯಾಗಿ ಕಾಣಿಸುತ್ತಿಲ್ಲ. ಸಂಭಾವ್ಯ ಪರಿಣಾಮಗಳಿಗೆ ಚಿತ್ರರಂಗ ಸಜ್ಜಾಗಿಯೂ ಇಲ್ಲ. ಆದ್ದರಿಂದ ಕೊರೊನಾಗಿಂತ ದೊಡ್ಡ ಸಂಕಷ್ಟವೊಂದು ತಿರುವಿನಾಚೆ ಬಾಯಿತೆರೆದು ನಿಂತಿರುವ ಸಾಧ್ಯತೆಯನ್ನೂ ಅಲ್ಲಗಳೆಯುವಂತಿಲ್ಲ. 2020ರ ಈ ಇಳಿಸಂಜೆಯಲ್ಲಿ, ಪ್ರೀ ಕ್ಲೈಮ್ಯಾಕ್ಸಿನಲ್ಲಿ ಸೀಟಿನ ತುದಿಯಲ್ಲಿ ಬೆರಗು, ಆತಂಕ, ಕುತೂಹಲದಿಂದ ‘ಮುಂದೇನು?’ ಎಂಬ ಪ್ರಶ್ನೆಗೆ ಆತುಕೊಂಡು ಕೂತ ಪ್ರೇಕ್ಷಕನ ಹಾಗೆ ಇಡೀ ಚಿತ್ರರಂಗವೇ ಕೂತಿದೆ. ಅದು ಸಹಜವೇ. ಯಾಕೆಂದರೆ ತುಂಬ ಸಲ ಕ್ಲೈಮ್ಯಾಕ್ಸೇ ಚಿತ್ರದ ಫ್ಲಾಪ್ ಮತ್ತೆ ಹಿಟ್‌ಗಳನ್ನು ನಿರ್ಧರಿಸುತ್ತದೆ.

ಪ್ರತಿಕ್ರಿಯಿಸಿ: feedback@sudha.co.in